# ಪಶ್ಚಿಮ ಘಟ್ಟಕ್ಕೆ ವಲಸೆ ನೀತಿ ಬೇಕು



ದೇಶದ ವಿವಿಧ ಮಹಾನಗರಗಳಲ್ಲಿ, ವಿದೇಶಗಳಲ್ಲಿ ಇರುವವರಿಗೆ ಪಶ್ಚಿಮ ಘಟ್ಟದ ಸೆರಗಿನಲ್ಲಿರುವ ತಂಪಾದ ಹಳ್ಳಿಗಳಲ್ಲಿ ಎಸ್ಟೇಟುಗಳನ್ನು ಖರೀದಿಸಬೇಕೆಂಬಾಸೆ. ಅಲ್ಲೊಂದು ರೆಸಾರ್ಟ್ ನಡೆಸುವ ಆಸೆ. ನಿವೃತ್ತರಾದ ಮೇಲೆ ವಿಶಾಲವಾದ ಅಂಗಳವಿರುವ, ಜುಳುಜುಳು ಹರಿಯುವ ನದಿಯ ಅಂಚಿನಲ್ಲಿಯೇ ಇರುವ ಮನೆಯಲ್ಲಿ ವಾಸಿಸಬೇಕೆಂಬ ಆಸೆ. ಅದಕ್ಕಾಗಿ ಅವರು ಪಶ್ಚಿಮ ಘಟ್ಟದ ತಪ್ಪಲಿನಲ್ಲಿರುವ ಊರುಗಳಿಗೆ ಬಂದು ನೆಲೆಸುತ್ತಾರೆ. ಅಲ್ಲಿಯೇ ಉದ್ಯಮಗಳನ್ನು ಮಾಡುತ್ತಾರೆ. ಹಾಗಿದ್ದರೆ ವರದಿಗಳ ನೆಪದಲ್ಲಿ ಪಶ್ಚಿಮ ಘಟ್ಟದ ತಪ್ಪಲಿನಿಂದ ಎದ್ದು ಹೋಗುವವರು ಎಲ್ಲಿ ಹೋಗಬೇಕು ಅಥವಾ ಎಲ್ಲಿಗೇ ಆಗಲಿ ಯಾಕೆ ಹೋಗಬೇಕು?

ಪಶ್ಚಿಮ ಘಟ್ಟಕ್ಕೆ ಸೂಕ್ತವಾದ ವಲಸೆ ನೀತಿಯೊಂದನ್ನು ಜಾರಿ ಮಾಡಬೇಕು. ಒಂದುವೇಳೆ ವರದಿ ಜಾರಿಯನ್ನು ವಿರೋಧಿಸಿ ಕಾನೂನುಗಳನ್ನು ಬಿಗಿ ಮಾಡುವುದಾದರೆ, ಲಕ್ಷಾಂತರ ಮರಗಳನ್ನು ಕಡಿದು ಜಾರಿ ಮಾಡಬೇಕಾಗಿರುವ ಈ ಯೋಜನೆಗಳನ್ನು ವಿರೋಧಿಸುತ್ತಾರೆಯೇ?

1 ಬೆಳಗಾವಿ–ಗೋವಾ ರಾಷ್ಟ್ರೀಯ ಹೆದ್ದಾರಿ (NH4A) ಅಗಲೀಕರಣ ಯೋಜನೆಯಲ್ಲಿ ರಸ್ತೆಯು ಕರ್ನಾಟಕದ ಕಾಳಿ ಹುಲಿಸಂರಕ್ಷಿತ ಪ್ರದೇಶ ಮತ್ತು ಗೋವಾ ಪಶ್ಚಿಮಘಟ್ಟ ಪ್ರದೇಶದಲ್ಲಿನ ಭಗವಾನ್ ಮಹಾವೀರ ವನ್ಯಜೀವಿ ಅಭಯಾರಣ್ಯದಲ್ಲಿ ಹಾದುಹೋಗುತ್ತದೆ. ಇದಕ್ಕಾಗಿ ಒಂದು ಲಕ್ಷ ಮರಗಳನ್ನು ಕಡಿಯಲಾಗಿದೆ.

2 ತಿನಾಯ್ ಘಾಟ್ – ಕ್ಯಾಸಲ್ ರಾಕ್ – ಕರನ್ಜೋಲ್ (ಗೋವಾ), ಇಲ್ಲಿಯವರೆಗೆ ಜೋಡಿ ರೈಲು ಮಾರ್ಗಕ್ಕಾಗಿ 148.84 ಹೆಕ್ಟೇರು ಅರಣ್ಯ ನಾಶವಾಗಲಿದೆ. ಗೋವಾ –ತಮ್ನರ್ (ಚತ್ತೀಸಗಢ ವಿದ್ಯುತ್ ಪ್ರಸರಣಾ ಮಾರ್ಗಕ್ಕಾಗಿ ಕರ್ನಾಟಕದ ಪಶ್ಚಿಮಘಟ್ಟದಲ್ಲಿ 177 ಹೆಕ್ಟೇರು ದಟ್ಟವಾದ ಅರಣ್ಯ ನಾಶವಾಗಲಿದೆ. ಶಿರಸಿ–ಕುಮಟಾ ಹೆದ್ದಾರಿಗಾಗಿ 50 ಸಾವಿರ ಬಲಿತ ಪಾರಂಪರಿಕ ಮರಗಳನ್ನು ಕಡಿಯಲಾಗಿದೆ.

3 ಹುಬ್ಬಳ್ಳಿ–ಅಂಕೋಲಾ ರೈಲ್ವೆ ಮಾರ್ಗ ಯೋಜನೆಗಾಗಿ ಉತ್ತರ ಕನ್ನಡದಲ್ಲಿ 700 ಹೆಕ್ಟೇರು ಅರಣ್ಯ ಬಲಿಯಾಗಲಿದೆ.

4 ಶರಾವತಿ ಸಿಂಹಬಾಲದ ಸಿಂಗಳೀಕ ವನ್ಯಜೀವಿ ಅಭಯಾರಣ್ಯದಲ್ಲಿ 2000 ಮೆ.ವಾ. ಅಂತರ್ಗತ ಜಲವಿದ್ಯುತ್ ಯೋಜನೆಯ ಪ್ರಸ್ತಾಪವಿದೆ. ಪರಿಸರ ಹೋರಾಟಗಾರರು ಕೋರ್ಟ್ ಮೆಟ್ಟಿಲೇರಿದ್ದು, ಸದ್ಯಕ್ಕೆ ಹೈಕೋರ್ಟ್ ಇದಕ್ಕೆ ತಾತ್ಕಾಲಿಕ ತಡೆ ನೀಡಿದೆ. ಇದಕ್ಕಾಗಿ ಈ ಅಭಯಾರಣ್ಯದ ಅತಿಸೂಕ್ಷ್ಮ ಪ್ರದೇಶದ 800 ಹೆಕ್ಟೇರ್ ಭೂಮಿಯ ಅಗತ್ಯವಿದೆ.

ಶರಾವತಿ ಕಣಿವೆಯಲ್ಲಿ ಸರ್ವ ಋತು ಜಲಪಾತ ಮತ್ತು 5 ಸ್ಟಾರ್ ಹೋಟೆಲ್ ಯೋಜನೆಗಳು ಪಶ್ಚಿಮ ಘಟ್ಟದ ಸಮತೋಲನವನ್ನು ಕೆಡಿಸಲಿವೆ. ಸರ್ವ ಋತು ಜಲಪಾತ, ರಾತ್ರಿಯಲ್ಲಿ ಪ್ರಖರ



ಸಂರಕ್ಷಣೆಯಲ್ಲಿ ತೊಡಗಿಕೊಂಡ ಹಳ್ಳಿಗಳಿಗೆ, ರಾಜ್ಯಗಳಿಗೆ ಅಥವಾ ದೇಶಗಳಿಗೆ (ಕಡು ಹಸಿರು ಪ್ರದೇಶವಿರುವ ಆಫ್ರಿಕಾದಂತಹ ನಾಡು) ವಿಶೇಷ ಮನ್ನಣೆಯನ್ನು ನೀಡುವ ವ್ಯವಸ್ಥೆಯೊಂದು ರೂಪುಗೊಳ್ಳಬೇಕಾಗಿದೆ ಎಂಬ ಆಗ್ರಹವು ವಿಶ್ವದೆಲ್ಲೆಡೆ ರೂಪುಗೊಂಡಿದೆ. ಹಣವನ್ನಷ್ಟೇ ಸಂಪತ್ತು ಎಂದು ನಾವು ಎಲ್ಲಿಯವರೆಗೆ ಆರಾಧಿಸುತ್ತ, ಹಣವನ್ನೇ ಅನಿವಾರ್ಯತೆಯ ಸ್ಥಾನದಲ್ಲಿ ಇರಿಸುತ್ತೇವೆಯೋ ಅಲ್ಲಿಯವರೆಗೆ ಈ ಚರ್ಚೆಯು ಜೀವಂತವಾಗಿರುತ್ತದೆ. ಯಾಕೆಂದರೆ ಆರ್ಥಿಕತೆಯು ಏರುಮುಖಿ ಬಾಣದಂತೆ. ಆ ಬಾಣವು ಎಷ್ಟು ವೇಗವಾಗಿ ಮೇಲ್ಮುಖವಾಗಿ ಚಲಿಸುತ್ತದೋ, ಪ್ರಾಕೃತಿಕ ಸಂಪತ್ತು ಅಷ್ಟೇ ವೇಗವಾಗಿ ಇಳಿಮುಖವಾಗುತ್ತಾ ಕರಗತೊಡಗುವುದು. ಇದೇ ಎಳೆಯನ್ನು ಹಿಡಿದು ಪರಿಸರ ಹೋರಾಟಗಾರ ಸಹದೇವ್ ಶಿವಪುರ ಅವರು, 'ಕಸ್ತೂರಿ ರಂಗನ್ ವರದಿಯ ಹೊರತಾಗಿಯೂ ಕಾನೂನುಗಳನ್ನೇ ಬಳಸಿಕೊಂಡು ಪಶ್ಚಿಮ ಘಟ್ಟ ಸಂರಕ್ಷಣೆ ಮಾಡಬಹುದು ಎಂದು ವಾದಿಸುವವರು, ಇಡೀ ಘಟ್ಟ ಪ್ರದೇಶವನ್ನು ಬುಡಮೇಲು ಮಾಡಲು ಕಾದು ಕುಳಿತ ಯೋಜನೆಗಳನ್ನು ವಿರೋಧಿಸುತ್ತಾರೆಯೇ' ಎಂದು ಪ್ರಶ್ನೆ ಮಾಡುತ್ತಾರೆ. 'ಕಳೆದ ಐದಾರು ವರ್ಷಗಳಲ್ಲಿ ಮಲೆನಾಡು ಭಾಗದಲ್ಲಿ ಕೇವಲ ರಸ್ತೆಗಳ ಅಗಲೀಕರಣಕ್ಕಾಗಿ ನಾಶವಾದ ಮರಗಳ ಸಂಖ್ಯೆಗಳನ್ನು ನೋಡಿದರೆ ಗಾಬರಿಯಾಗುವಂತಿದೆ' ಎನ್ನುತ್ತಾರೆ.

2011ರಲ್ಲಿ ವರದಿ ಸಲ್ಲಿಸಿದ್ದ ಡಾ. ಮಾಧವ ಗಾಡ್ಗೀಳ್ ಸಮಿತಿಯು ಪಶ್ಚಿಮಘಟ್ಟ ವ್ಯಾಪ್ತಿಯಲ್ಲಿ 1,29,037 ಚದರ ಕಿ.ಮೀ. ವ್ಯಾಪ್ತಿ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯ ಎಂದು ಘೋಷಿಸಬೇಕು ಮತ್ತು ರಕ್ಷಿಸಬೇಕು ಎಂದು ಶಿಫಾರಸು ಮಾಡಿತ್ತು. ನಂತರ, ಕಸ್ತೂರಿರಂಗನ್